# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೧೦, ಜೂನ್, ೨೦೨೪(ಜ್ಯೇಷ್ಠ, ೨೦, ಶಕವರ್ಷ, ೧೯೪೬)<br>BENGALURU, MONDAY, 10, JUNE, 2024(JYEISHTA, 20, SHAKAVARSHA, 1946) | ನಂ. ೨೬೬<br>No. 266 |
|---|---|---|

**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 28 SHASANA 2024, BENGALURU, DATED:10.06.2024**

The Karnataka Land Revenue (Amendment) Bill, 2024 ಇದಕ್ಕೆ 2024ರ ಮಾರ್ಚ್ ತಿಂಗಳ 21ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 24ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

KARNATAKA ACT NO. 24 OF 2024
(First Published in the Karnataka Gazette Extra-ordinary on the 10th day of June, 2024)

**THE KARNATAKA LAND REVENUE (AMENDMENT) ACT, 2024**
(Received the assent of the Governor on the 21st day of March, 2024)

An Act further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Seventy fifth year of the Republic of India, as follows:-

1. **Short title and commencement.-**(1) This Act may be called the Karnataka Land Revenue (Amendment) Act, 2024.

(2) It shall come into force at once.

**2. Amendment of Section 94-A:-** In Section 94-A of Karnataka Land Revenue Act, 1964 (Karnataka Act 12 of 1964),-

(i) after sub-section (1) the following proviso shall be inserted, namely:-

“Provided that

(i) if the member of the Legislative Assembly of the respective Assembly Constituency has indicated in writing that they are unable or unwilling to be a member of the Committee, or

(ii) if the position of the Member of Legislative Assembly for that constituency is vacant, the State Government shall nominate any person as a member of the Committee of such Assembly Constituency.”

(ii) for sub-section (2) , the following shall be substituted, namely:-

“The State Government shall appoint the Tahsildar of the taluk constituting the major part of that constituency on the basis of population as the Secretary of the committee.”

(iii) in sub-section (2A),-

(a) for the word “taluk” the word “constituency” shall be substituted;

(b) the words “and another as the Secretary of the committee.” Shall be omitted; and

(c) for the words “Deputy Commissioner” the words “State Government” shall be substituted.

(iv) in sub-section (4), the words “or any portion thereof” shall be omitted.

(v) in the first proviso to sub-section (4), for the word “person” the word “family” shall be substituted.

By Order and in the name of
the Governor of Karnataka,

**(G. SRIDHAR)**
Secretary to Government
Department of Parliamentary
Affairs and Legislation

**<u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>**
**<u>ಅಧಿಸೂಚನೆ</u>**
**<u>ಸಂಖ್ಯೆ: ಸಂವ್ಯಶಾಇ 28 ಶಾಸನ 2024, ಬೆಂಗಳೂರು, ದಿನಾಂಕ:10.06.2024.</u>**

The Kannada Language Comprehensive Development Act, 2022 (Karnataka Act No. 13 of 2023)ರ ಪ್ರಕರಣ 6 ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Land Revenue (Amendment) Act, 2024 (Karnataka Act No. 24 of 2024) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 24**

(2024 ರ ಜೂನ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2024**

(2024 ರ ಮಾರ್ಚ್ ತಿಂಗಳ 21ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಎನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 94ಎ ಪ್ರಕರಣದಲ್ಲಿ,

(i) (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು,-

(i) ಸಂಬಂಧಿತ ವಿಧಾನ ಸಭಾ ಕ್ಷೇತ್ರದ ವಿಧಾನ ಸಭೆಯ ಸದಸ್ಯರು ಸಮಿತಿಯ ಸದಸ್ಯರಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಥವಾ ಇಚ್ಛಿಸಿರುವುದಿಲ್ಲವೆಂದು ಲಿಖಿತದಲ್ಲಿ ಸೂಚಿಸಿದ್ದರೆ, ಅಥವಾ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(ii) ಆ ವಿಧಾನ ಸಭಾ ಕ್ಷೇತ್ರದಲ್ಲಿ ವಿಧಾನ ಸಭೆಯ ಸದಸ್ಯರ ಹುದ್ದೆಯು ಖಾಲಿಯಿದ್ದರೆ ಅಂಥ ವಿಧಾನ ಸಭಾ ಕ್ಷೇತ್ರದ ಸಮಿತಿಯ ಸದಸ್ಯನನ್ನಾಗಿ ರಾಜ್ಯ ಸರ್ಕಾರವು ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು."

(ii) (2)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ರಾಜ್ಯ ಸರ್ಕಾರವು, ಜನಸಂಖ್ಯೆಯ ಆಧಾರದಲ್ಲಿ ವಿಧಾನ ಸಭೆಯ ಕ್ಷೇತ್ರದ ಪ್ರಮುಖ ಭಾಗವನ್ನು ಹೊಂದಿರುವ ತಾಲ್ಲೂಕಿನ ತಹಶೀಲ್ದಾರನನ್ನು ಸಮಿತಿಯ ಸದಸ್ಯನನ್ನಾಗಿ ನೇಮಿಸತಕ್ಕದ್ದು."

(iii) (2ಎ) ಉಪಪ್ರಕರಣದಲ್ಲಿ,-

(ಎ) "ತಾಲ್ಲೂಕಿಗೆ" ಎಂಬ ಪದದ ಬದಲಿಗೆ "ವಿಧಾನ ಸಭಾ ಕ್ಷೇತ್ರಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಹಾಗೂ ಇನ್ನೊಬ್ಬರನ್ನು ಸಮಿತಿಯ ಕಾರ್ಯದರ್ಶಿಯಾಗಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ಸಿ) "ಡೆಪ್ಯೂಟಿ ಕಮಿಷನರ್‌ನು" ಎಂಬ ಪದಗಳ ಬದಲಾಗಿ "ರಾಜ್ಯ ಸರ್ಕಾರವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) (4)ನೇ ಉಪಪ್ರಕರಣದಲ್ಲಿ "ಅಥವಾ ಅದರ ಭಾಗವನ್ನು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(v) (4)ನೇ ಉಪಪ್ರಕರಣದ ಮೊದಲನೇ ಪರಂತುಕದಲ್ಲಿ "ವ್ಯಕ್ತಿಯು" ಎಂಬ ಪದದ ಬದಲಾಗಿ "ಕುಟುಂಬವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

The above translation of the Karnataka Land Revenue (Amendment) Act, 2024 (Karnataka Act 24 of 2024) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No.13 of 2023).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH
Digitally signed by THAMMAIAH
DN: c=IN, st=Karnataka,
2.5.4.20=be54f34f4e31eae50203ca7fab5ceb3794f20a8460a2582ef28294d43b8f8b16,
postalCode=560059, street=BANGALORE, pseudonym=ca58c76cf7e2445d7a4f3f51407e025e,
serialNumber=4d9b284dcc53d39f1425f50485de07dd86efa302a3fce3729eddea0c1b5098e0,
ou=GOVERNMENT OF KARNATAKA, o=GOVERNMENT OF KARNATAKA, cn=THAMMAIAH
Date: 2024.06.10 17:20:29 +05'30'